ಅಧ್ಯಕ್ಷರು :— ಶ್ರೀ ಎ.ಟಿ. ರಾಮಸ್ವಾಮಿಯವರ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಸರ್ಕಾರದಿಂದ ಸಮಯವನ್ನು ಕೇಳಿದ್ದಾರೆ. ಉತ್ತರವನ್ನು ತರಿಸುವುದಕ್ಕೆ ಎಷ್ಟು ದಿವಸಗಳು ಬೇಕಾಗುತ್ತದೆ.

ಡಾ. ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) :— ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ 10 ದಿವಸಗಳ ಸಮಯವನ್ನು ಕೊಡಿ.

ಅಧ್ಯಕ್ಷರು :— ನಾನು ಯಾವ ಮಂತ್ರಿಗಳಿಗೂ ಒಂದು ವಾರಕ್ಕೂ ಹೆಚ್ಚು ಕಾಲ ಸಮಯವನ್ನು ಕೊಡುತ್ತಿಲ್ಲ. ಅಧಿವೇಶನ ಇರುವುದೇ ಬಹಳ ಕಡಿಮೆ ದಿವಸ ಇದೆ.

ಡಾ: ಎಂ. ಶಂಕರ್ ನಾಯಕ್ :— ಒಂದು ವಾರ ಸಮಯವನ್ನು ಕೊಡಿ.

ಅಧ್ಯಕ್ಷರು :— 31ನೆ ತಾರೀಖು ಅಧಿವೇಶನ ಅಡ್ಜರ್ನ್ ಆಗುತ್ತದೆ. ಅಷ್ಟರೊಳಗಾಗಿ ಉತ್ತರವನ್ನು ಒದಗಿಸಿ ಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ :— ಉತ್ತರವನ್ನು ದಯಮಾಡಿ ತರಿಸಿಕೊಡಿ.

ಅಧ್ಯಕ್ಷರು :— ಉತ್ತರವನ್ನು ತರಿಸಿಕೊಡುತ್ತೇನೆ. ಯಾವ ಯಾವ ಸಚಿವರು, ಯಾವ ಯಾವ ಪ್ರಶ್ನೆಗಳಿಗೆ ಎಷ್ಟು ದಿನಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ನೋಟ್ ಮಾಡಿಕೊಳ್ಳಬೇಕು.

<u>ಉಡುಪಿಯ ಜಿಲ್ಲಾ ಆಸ್ಪತ್ರೆಗೆ ಅವಶ್ಯ ಸೌಲಭ್ಯ ಪೂರೈಸುವುದು.</u>

23(45) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಈಗಾಗಲೇ ತುಂಬಾ ಸಮಯ ಕಳೆದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಿಲ್ಲಾ ಆಸ್ಪತ್ರೆಗೆ ಒದಗಿಸಬೇಕಾಗಿರುವ ಆವರ್ತನ ಅನಾವರ್ತನ ಸೌಕರ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸದೆ ಇರುವುದಕ್ಕೆ ಕಾರಣಗಳೇನು? ಯಾವಾಗ ಅದನ್ನು ಪೂರೈಸಲಾಗುವುದು? ವಿವರ ನೀಡುವುದು.

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ದಿನಾಂಕ : 1-4-98 ರಂದು ಮೇಲ್ದರ್ಜೆಗೇರಿಸಿದೆ.

ಆ) ಸುಮಾರು ರೂ. 3.23 ಕೋಟಿಗಳು ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯಿಂದ ಅವಶ್ಯಕ ಸೌಲಭ್ಯವನ್ನು ಪೂರೈಸಲು ಒದಗಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ದಿನಾಂಕ : 1-4-98 ರಿಂದ ಉಡುಪಿ ಜಿಲ್ಲಾ ಆಸ್ಪತ್ರೆ ಮಾನ್ಯತೆ ಪಡೆದಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ದಿನಾಂಕ : 1-4-98 ರಿಂದ ಇಲ್ಲಿಯವರೆವಿಗೂ ಕೂಡ ಹೊಸದಾಗಿ ಜಿಲ್ಲಾ ಆಸ್ಪತ್ರೆಗೆ ಬೇಕಾಗಿರತಕ್ಕಂತಹ ಅಡಿಷನಲ್ ಬೆಡ್‌ಗೆ ಅಡಿಷನಲ್ ಡಾಕ್ಟರ್ ಹುದ್ದೆಗಳ ಮಂಜೂರಾತಿಯಾಗಲಿ, ಅಥವಾ ಎ.ಎನ್.ಎಂ. ಟ್ರೈನಿಂಗ್ ಸೆಂಟರ್‌ಗಳಾಗಲಿ, ನರ್ಸಿಂಗ್ ಟ್ರೈನಿಂಗ್ ಸೆಂಟರ್ ಆಗಲಿ, ಇದರ ಯಾವ ಪ್ರಸ್ತಾವನೆಯೂ ಕೂಡ ಇದುವರೆಗೂ ಬಂದಿಲ್ಲ. ಜಿಲ್ಲಾ ಆಸ್ಪತ್ರೆ ಆಗಬೇಕಾದರೆ ಕನಿಷ್ಠ 250 ಬೆಡ್‌ಗಳನ್ನು ಹಾಕಬೇಕು. ನಮ್ಮಲ್ಲಿ ಈಗಾಗಲೇ 200 ಬೆಡ್‌ಗಳ ಆಸ್ಪತ್ರೆ ಇದೆ. ಈಗ ನಾವು 300 ಬೆಡ್‌ಗಳ ಆಸ್ಪತ್ರೆ ಕೇಳುತ್ತಿದ್ದೇವೆ. 300 ಬೆಡ್‌ಗಳ ಆಸ್ಪತ್ರೆ ಮಾಡುವ ಇರಾದೆ ಸರ್ಕಾರಕ್ಕೆ ಇದೆಯೇ? ಯಾವಾಗ ಇದನ್ನು ಮಂಜೂರಾತಿಯನ್ನೂ ಕೊಡುತ್ತೀರಿ? 3.28 ಲಕ್ಷ ರೂಪಾಯಿಗಳನ್ನು ನೀವು ಕಟ್ಟಡಕ್ಕಾಗಿ ಕೊಟ್ಟಿದ್ದೀರಿ. ಇದು ಹಿಂದೆಯೇ ಉಡುಪಿ ಜಿಲ್ಲಾ ಕೇಂದ್ರ ಆಗುವ ಮುಂಚೆಯೇ ಇದ್ದ ಪ್ರಸ್ತಾವನೆ. ಎರಡನೆಯ ಪ್ರಶ್ನೆ ಏನೆಂದರೆ, ಈ ಕಟ್ಟಡದ ಉದ್ಘಾಟನೆಯನ್ನು ಮಾನ್ಯ ಮಂತ್ರಿಗಳು ಮಾಡಿ ಇವತ್ತಿಗೆ 6 ತಿಂಗಳಾಯಿತು. ಆದರೆ ಬ್ಲಡ್ ಬ್ಯಾಂಕ್‌ಗೆ ಡ್ರಗ್ ಕಂಟ್ರೋಲ್‌ನಿಂದ ಇದುವರೆವಿಗೆ ಲೈಸೆನ್ಸ್‌ನ್ನು ಕೊಟ್ಟಿರುವುದಿಲ್ಲ. ಏಕೆ, ಲೈಸೆನ್ಸ್‌ನ್ನು ಕೊಟ್ಟಿಲ್ಲವೆಂದು ಕೇಳಿದರೆ ಡ್ರಗ್ ಕಂಟ್ರೋಲ್‌ನವರು ಫುಲ್ ಟೈಮ್ ಡಾಕ್ಟರ್ಸ್, ಎ.ಎನ್.ಎಂ. ಲ್ಯಾಬ್ ಟೆಕ್ನಿಷಿಯನ್ಸ್ ಆಯ್ಕೆಯಾಗುವವರೆಗೆ ಲೈಸೆನ್ಸ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಬ್ಲಡ್ ಬ್ಯಾಂಕ್ 6 ತಿಂಗಳಿನಿಂದ ಕೆಲಸವನ್ನು ಮಾಡುತ್ತಿಲ್ಲ. ಸುಮಾರು 15 ಲಕ್ಷ ರೂಪಾಯಿಗಳು ಇದಕ್ಕಾಗಿ ವೆಚ್ಚವಾಗಿದೆ. ಈ ಸಿಬ್ಬಂದಿಯ ನೇಮಕಾತಿಯನ್ನು ಯಾವಾಗ ಮಾಡುತ್ತೀರಿ? ಈ ಬ್ಲಡ್ ಬ್ಯಾಂಕ್ ಜನಗಳಿಗೆ ಉಪಯೋಗವಾಗುವುದರಿಂದ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಡಾ : ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಈಗ ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ 124 ಬೆಡ್‌ಗಳು ಇದೆ. ಅಲ್ಲಿಗೆ ಹೆಚ್ಚುವರಿಯಾಗಿ 76 ಹಾಸಿಗೆಗಳನ್ನು ಕೊಡುವುದಕ್ಕೆ ಟೆಂಡರ್‌ಗಳನ್ನು ಕರೆಯಲಾಗಿದೆ. ಈಗಾಗಲೇ ಆ ಕೆಲಸವನ್ನು

ಗೋಪಾಲಕೃಷ್ಣರವರಿಗೆ ಕೊಟ್ಟಿದ್ದೇವೆ. ಅಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಮತ್ತೆ ಬಿಲ್ಡಿಂಗ್ ಮತ್ತು ಮೆಟರ್‌ನಿಟಿ ಆಸ್ಪತ್ರೆ ರಿನೋವೇಷನ್ ಗೋಸ್ಕರ 1.1 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಈಗ ಆ ಕೆಲಸವು ಪ್ರಾರಂಭವಾಗುವುದರಲ್ಲಿ ಇದೆ. ಬ್ಲಡ್ ಬ್ಯಾಂಕ್‌ಗಳಲ್ಲಿ ಕೆಲವು ನಿಯಮಗಳು ಇದೆ. ಇಷ್ಟೇ ಉಪಕರಣಗಳು ಇರಬೇಕು, ಅಲ್ಲಿ ಕೆಲಸ ಮಾಡುವವರು ಈ ರೀತಿ ಇರಬೇಕು ಎಂದು ಇದೆ. ಈಗ ರೀಜಿನಲ್ ಆಫೀಸನ್ನು ಬಾಂಬೆಯಲ್ಲಿ ಮಾಡಿದ್ದಾರೆ. ಅವರು ಬಂದು ಲೈಸೆನ್ಸ್‌ನ್ನು ಕೊಡುವಂಥದ್ದು. ಈಗ ಲ್ಯಾಬ್ ಟೆಕ್ನಿಷಿಯನ್ ಹುದ್ದೆಗೆ ನೇಮಕಾತಿ ನಡೆಯುತ್ತಿದೆ. ಇಷ್ಟರಲ್ಲೇ ಅವರ ನೇಮಕಾತಿಯು ಆಗುತ್ತದೆ. ಅದನ್ನು ಫುಲ್ ಫ್ಲೆಡ್ಜ್ ಮಾಡಿದ ನಂತರ ಬ್ಲಡ್ ಬ್ಯಾಂಕ್ ಕೆಲಸ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಯು.ಆರ್. ಸಭಾಪತಿ :— ತಾವು ಲ್ಯಾಬ್ ಟೆಕ್ನಿಷಿಯನ್ಸ್‌ಗಳ ಹುದ್ದೆಯ ಬಗ್ಗೆ ಸ್ಕೂಟಿನಿ ಆಗುತ್ತದೆಂದು ಹೇಳುತ್ತಿದ್ದೀರಿ. ಈಗ ಡ್ರಗ್ ಕಂಟ್ರೋಲ್‌ನವರು ಲೈಸೆನ್ಸ್‌ಗಳನ್ನು ಇಷ್ಯೂ ಮಾಡಬೇಕಾದರೆ ನೀವು ಇಮಿಡಿಯೆಟ್‌ಆಗಿ ಎರಡು ಸ್ಟ್ಯಾಫ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದರೆ ಆಗುತ್ತದೆ. ಫುಲ್ ಟೈಮ್ ಡಾಕ್ಟರ್‌ಗಳನ್ನು, ನರ್ಸ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದರೆ ಆಗುತ್ತದೆ, ಅಥವಾ ಬೇರೆ ಎಲ್ಲಿಂದಲಾದರೂ ಕಳುಹಿಸಿದರೆ ಆಗುತ್ತದೆ. ಈಗ ನಮ್ಮ ಆಸ್ಪತ್ರೆಯಲ್ಲಿ ಟ್ರೈನಿಂಗ್ ಡಾಕ್ಟರ್ಸ್‌ಗಳು ಇದ್ದಾರೆ. ಅವರನ್ನೇ ನೀವು ಪೋಸ್ಟಿಂಗ್ಸ್ ಕೊಟ್ಟರೆ ಆಗುತ್ತದೆ. ತಾವು ಹಾರಿಕೆ ಉತ್ತರವನ್ನು ಕೊಟ್ಟರೆ ನನಗೆ ಸರಿ ಕಾಣುವುದಿಲ್ಲ. ನೀವು ಡೆಫನೆಟ್‌ಆಗಿ ಹೇಳಿದರೆ ಒಳ್ಳೆಯದು.

ಡಾ: ಎಂ. ಶಂಕರ ನಾಯಕ್ :— ನಮ್ಮಲ್ಲಿ ಡಾಕ್ಟರ್ಸ್‌ಗಳು ಇದ್ದಾರೆ. ಟೆಕ್ನಿಷಿಯನ್ಸ್ ಮತ್ತು ನರ್ಸ್‌ಗಳನ್ನು ಆದಷ್ಟು ಬೇಗನೆ ಅಪಾಯಿಂಟ್‌ಮೆಂಟ್ ಮಾಡಿ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :— ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ ಮಾನ್ಯ ಸಭಾಪತಿಯವರು ಹೇಳಿದ ಹಾಗೆ, ಮೊದಲನೆಯದಾಗಿ ಅಲ್ಲಿ ಸಿಬ್ಬಂದಿಗಳ ಕೊರತೆ ಇದೆ, ಹಾಗೂ ಬ್ಲಡ್ ಬ್ಯಾಂಕ್‌ನ ಬಗ್ಗೆ ಹೇಳಿದ್ದಾರೆ. ಅಲ್ಲಿ ಟಿ.ಬಿ. ವಾರ್ಡ್ ಇದ್ದು ಅಲ್ಲಿ ದನಗಳು ಸಹ ಹೋಗದ ಪರಿಸ್ಥಿತಿಯಲ್ಲಿ ಇದೆ. ಅಲ್ಲಿ ಸರಿಯಾದ ಕಟ್ಟಡವಿಲ್ಲ, ಕಿಟಕಿ ಬಾಗಿಲುಗಳು ಇಲ್ಲ. ಬಡವರು ಬರುವ ಟಿ.ಬಿ. ಆಸ್ಪತ್ರೆಯಲ್ಲಿ ಔಷಧಿಗಳಿಲ್ಲ, ಅಂತರ ಪರಿಸ್ಥಿತಿ ಇದೆ. ದಯವಿಟ್ಟು ಅದನ್ನು ಸರಿಪಡಿಸಬೇಕು ಆ ಆಸ್ಪತ್ರೆಯಲ್ಲಿ ಎರಡು ಆಂಬುಲೆನ್ಸ್ ವಾಹನಗಳಿದ್ದು ಅದಕ್ಕೆ ಡ್ರೈವರುಗಳು ಇಲ್ಲ. ದಯವಿಟ್ಟು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು.

ಡಾ. ಎಂ. ಶಂಕರನಾಯಕ್ :— ಮಾನ್ಯ ಸದಸ್ಯರು ಟಿ.ಬಿ. ವಾರ್ಡ್ ಮೆಟರನಿಟಿ ಮತ್ತು ಚೈಲ್ಡ್ ಆಸ್ಪತ್ರೆ ವಿಚಾರದಲ್ಲಿ ಏನು ಹೇಳಿದ್ದಾರೆ ಅದನ್ನು ಹೆಲ್ತ್

ಸಿಸ್ಟಮ್‌ನಲ್ಲಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಫೇಸ್ 2ನಲ್ಲಿ ಆ ಕೆಲಸಗಳನ್ನು ಮಾಡುತ್ತಿದ್ದಾರೆ. ಅನೇಕ ಕಡೆ ಆಂಬುಲೆನ್ಸ್‌ಗಳಿಗೆ ಡ್ರೈವರ್‌ಗಳು ಶಾರ್ಟೇಜ್ ಇದ್ದಾರೆ. ಡ್ರೈವರ್ಸ್, ಫಾರ್ಮಸಿಸ್ಟ್, ಲ್ಯಾಬ್ ಟೆಕ್ನಿಷಿಯನ್ಸ್ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಇದಾದ ತಕ್ಷಣ ಆದಷ್ಟು ಬೇಗನೆ ಡ್ರೆಮರ್ಸ್‌ಗಳನ್ನು ನೇಮಕಾತಿ ಮಾಡುತ್ತೇವೆ.

ಡಾ. ಎಂ.ಪಿ. ಕರ್ಕಿ :— ಕಾರವಾರ ಸಿವಿಲ್ ಆಸ್ಪತ್ರೆಯಲ್ಲೂ ಕೂಡ ಬ್ಲಡ್ ಬ್ಯಾಂಕ್ ಪ್ರಾರಂಭವಾಗುವುದಕ್ಕೆ ಆಸ್ಪತ್ರೆಯಲ್ಲಿ ಫುಲ್ ಟೈಮ್ ಡಾಕ್ಟರ್‌ಗಳು ಇಲ್ಲದೇ ಇರತಕ್ಕಂತಹ ಕಾರಣ. ಎಲ್ಲಾ ಎಕ್ಯೂಪ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ. ಆಸ್ಪತ್ರೆ ಪ್ರಾರಂಭವಾಗುವುದಕ್ಕೆ ಒಬ್ಬ ಡಾಕ್ಟರ್‌ನ್ನು ನೇಮಿಸುವುದಕ್ಕೆ ಎಷ್ಟು ಸಮಯ ಬೇಕು, ಯಾವಾಗ ನೇಮಕ ಮಾಡುತ್ತೀರಾ? ಯಾವ ಅವಧಿಯೊಳಗೆ ಡಾಕ್ಟರನ್ನು ನೇಮಕ ಮಾಡುತ್ತೀರಾ ಎಂದು ಹೇಳಿದರೆ ಒಳ್ಳೆಯದಾಗುತ್ತದೆ.

11.40 ಎ.ಎಂ.

ಡಾ : ಎಂ. ಶಂಕರನಾಯಕ್ :— ಮಾನ್ಯ ಅಧ್ಯಕ್ಷರೇ, ಮುಂದಿನ ಜನರಲ್ಸ್ ಟ್ರಾನ್ಸ್‌ಫರ್ಸ್‌ನಲ್ಲಿ ಅಲ್ಲಿಗೆ ಡಾಕ್ಟರ್ಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೇ, ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಸಹ 5 ಸಾವಿರ ಮೇಜರ್ ಆಪರೇಷನ್ಸ್ ಆಗುತ್ತಿರುತ್ತವೆ. ಅಲ್ಲಿ ಪ್ರತಿದಿವಸ ಡೆಲವರಿ ಕೇಸಸ್ ಆಗುತ್ತಿರುತ್ತವೆ. ಅಲ್ಲಿ ಬ್ಲಡ್ ಬ್ಯಾಂಕ್ ಇನಾಗ್ಯುರೇಶನ್ ಆಗಿ ಒಂದು ವರ್ಷವಾದರೂ ಸಹ ಅನೇಕ ಸಾರಿ ಭರವಸೆಗಳನ್ನು ಕೊಟ್ಟಿದ್ದರೂ ಸಹ ಅಲ್ಲಿಗೆ ತಂತ್ರಜ್ಞರನ್ನು ಕೊಡಲಿಕ್ಕೆ ಆಗಿಲ್ಲ ಅಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತಂತ್ರಜ್ಞರನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರ ಅವಕಾಶ ಕೊಡುತ್ತೀರಾ?

ಡಾ : ಎಂ. ಶಂಕರನಾಯಕ್ :— ಮಾನ್ಯ ಅಧ್ಯಕ್ಷರೇ, ಕಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡುವಂತಹ ಅವಶ್ಯಕತೆ ಇಲ್ಲ. ಇನ್ನು ಒಂದು ತಿಂಗಳಿನಲ್ಲಿ ಎಲ್ಲಾ ಅಪಾಯಿಂಟ್ ಮೆಂಟ್ಸ್ ಮುಗಿಯುತ್ತದೆ.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ :— ಮಾನ್ಯ ಅಧ್ಯಕ್ಷರೇ ಧಾರವಾಡ ಒಂದು ಜಿಲ್ಲಾ ಕೇಂದ್ರ ಹಾಗೂ ಶೈಕ್ಷಣಿಕ ಕೇಂದ್ರ. ಅಲ್ಲಿ ಒಂದು ಸಿವಿಲ್ ಆಸ್ಪತ್ರೆ ಇದೆ. ಪ್ರಪಂಚ ಬ್ಯಾಂಕ್‌ನಿಂದ ಹಣ ಪಡೆದು ಅಲ್ಲಿ ಕಟ್ಟಡ ಆಗಿ ಅಲ್ಲಿ ಇನ್ನೂ ಯಾವುದೇ ತರಹದ ಯಂತ್ರೋಪಕರಣಗಳು ಇಲ್ಲ ಟ್ರೀಟ್‌ಮೆಂಟ್ ಮಾಡುವುದಕ್ಕೆ. ಇವತ್ತು ಎಕ್ಸರೇ ಆಗಲಿ, ಬ್ಲಡ್ ಬ್ಯಾಂಕ್ ಆಗಲಿ ತೀವ್ರಗತಿಯಿಂದ ಅಲ್ಲಿ

ಪ್ರಾರಂಭವಾಗಬೇಕಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಶಂಕರನಾಯಕ್ :— ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ಯಾವ ಆಸ್ಪತ್ರೆ ಎಂದು ಕೇಳಿದರೆ ನಾವು ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎನ್ನುವುದನ್ನು ಹೇಳಬಹುದು. ಈಗ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ಆ ಬಗ್ಗೆ ಮಾಹಿತಿ ಇಲ್ಲ. ಬೇರೆ ನೋಟೀಸ್ ಕೊಟ್ಟರೆ ತರಿಸಿ ಕೊಡುತ್ತೇನೆ.

<u>ಹೊನ್ನಾವರ ತಾಲ್ಲೂಕಿನ ಕೆಳಗಿನೂರು ನೆಲವಂಕಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗೆ ಕಟ್ಟಡ ಮಂಜೂರು.</u>

24(127) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಕೆಳಗಿನೂರು ನೆಲವಂಕಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗೆ ಕಟ್ಟಡ ಮಂಜೂರು ಮಾಡಲಾಗಿದೆಯೇ?

ಆ) ನೆಲವಂಕಿ ಕಿರಿಯ ಪ್ರಾಥಮಿಕ ಶಾಲೆ ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆಯೇ

ಇ) ಹಾಗಿದ್ದಲ್ಲಿ ಸ್ಥಳಾಂತರಿಸಲು ಕಾರಣಗಳೇನು?

ಈ) ಅದನ್ನು ನೆಲವಂಕಿಯಲ್ಲಿಯೇ ಮುಂದುವರೆಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು. ಇದಕ್ಕಾಗಿ 98-99ನೇ ಸಾಲಿನಲ್ಲಿ ಕಟ್ಟಡ ನಿರ್ಮಿಸಲು 60,000-00 ಗಳನ್ನು ಮಂಜೂರು ಮಾಡಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ನೆಲವಂಕಿಯ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿಯನ್ನು ನೆಲವಂಕಿಯಲ್ಲಿಯೇ ಕಟ್ಟಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊನ್ನಾವರ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಇವರಿಗೆ ದಿನಾಂಕ 16-2-1999 ರಂದು ಇಲಾಖಾ ಮಟ್ಟದಲ್ಲಿ ಪತ್ರ ಬರೆಯಲಾಗಿದೆ.